**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರ: 379/2023**

**ಸಾಕ್ಷಿ: ಸಿಡಬ್ಲ್ಯೂ:9 , ಪಿ.ಡಬ್ಲ್ಯೂ: 4**

| | | |
|---|---|---|
| ಸಾಕ್ಷಿದಾರರ ಹೆಸರು | : | ಸಂತೋಷ ಕುಮಾರ |
| ತಂದೆಯ ಹೆಸರು | : | ಆಂಜನೇಯಪ್ಪ ಎಮ್ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಪೊಲೀಸ್ ಉಪ ನಿರೀಕ್ಷಕರು , ಶಿರಸಿ ಪೊಲೀಸ ಠಾಣೆ |
| ವಾಸ್ತವ್ಯ | : | ಶಿರಸಿ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾ: 22/07/2025**

(**ಸಾಕ್ಷಿಯು ವಿಸಿ ಮೂಲಕ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ.**)

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ದಿನಾಂಕ: 02.02.2023 ರಿಂದ ದಿ: 13.06.2023 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಸದರಿ ಪ್ರಕರಣದ ಆರೋಪಿಯನ್ನು ಕೊಟೇಶ್ವರ ರಸ್ತೆಯ ಮನೆಯಿಂದ ಚಾಸಾ 10 ಮತ್ತು 11 ರವರೊಂದಿಗೆ ಆರೋಪಿಯನ್ನು ಪತ್ತೆ ಹಚ್ಚಿ ದಸ್ತಗಿರಿ ಮಾಡಿ ಚಾಸಾ – 12 ರವರ ಸಮಕ್ಷಮ ಹಾಜರುಪಡಿಸಿರುತ್ತೇನೆ. ಈ ಬಗ್ಗೆ ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಜೆ ಎನ್ ವಕೀಲರಿಂದ,**

ಕ್ರೈಂ ನಂಬರ್ 132/2022 ಅನ್ನು ದಾಖಲಿಸುವ ಕಾಲಕ್ಕೆ ಆರೋಪಿಯ ಹೆಸರು ನಮಗೆ ಗೊತ್ತಿತ್ತು. ದಾಳಿಗೆ ನಾನು , ಚಾಸಾ 10 ಮತ್ತು 11 ರವರು ಹೋಗಿದ್ದು ಇರುತ್ತದೆ. ಆರೋಪಿಯ ಮನೆ ಹತ್ತಿರ ಅಕ್ಕಪಕ್ಕದಲ್ಲಿ ರಾಷ್ಟ್ರೀಯ ಹೆದ್ದಾರಿ ಹಾಗೂ ಮನೆಗಳು ಇವೆ ಹಾಗೂ ವಾಹನಗಳು ತಿರುಗಾಡುತ್ತಿದ್ದವು ಎಂದರೆ ಸರಿ. ದಾಳಿಗೆ ಹೋದ ಸಮಯದಲ್ಲಿ ಅಕ್ಕಪಕ್ಕದವರು ನೋಡಿರುತ್ತಾರೆ. ದಾಳಿ ಮಾಡಿದ ಸ್ಥಳದಲ್ಲಿ ಯಾವುದೇ ವಾಹನಗಳು ಇರಲಿಲ್ಲ. ಸದರಿ ಪ್ರಕರಣಕ್ಕೆ ಸಂಬಂಧಿಸಿ ಪಂಚನಾಮೆಯನ್ನು ಮಾಡಿಲ್ಲ. ಸದರಿ ಪ್ರಕರಣಕ್ಕೆ ಸಂಬಂಧಿಸಿ ನನ್ನ ಹೇಳಿಕೆಯನ್ನು ನೀಡಿದ್ದು ಇರುತ್ತದೆ. ನಾವು ಯಾವುದೇ ದಾಳಿ ಮಾಡಿದ್ದೇ ಇಲ್ಲ ಹಾಗೂ ಯಾವುದೇ ಹೇಳಿಕೆ ನೀಡಿದ್ದೇ ಇಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳಿಗ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ

ಸರಿಯಲ್ಲ.  ಸದರಿ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಆರೋಪಿಯನ್ನು ಬಂಧಿಸಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ಸಾಕ್ಷಿಗೆ ವಿಸಿ ಮುಖಾಂತರ ಓದಿ ಹೇಳಿ ಸರಿ ಇದೆ ಎಂದು ಹೇಳಿದ ನಂತರ ಪ್ರತಿಯನ್ನು ತೆಗೆಯಲಾಗಿರುತ್ತದೆ. ಸಾಕ್ಷಿಯು ವಿಸಿ ಮುಖಾಂತರ ಹಾಜರಿದ್ದ ಕಾರಣ ಸದ್ರಿಯವರ ಸಹಿಯನ್ನು ಪಡೆದುಕೊಂಡಿರುವುದಿಲ್ಲ).**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

## ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

**ಸಿಸಿ ನಂಬರಃ 379/2023**

**ಸಾಕ್ಷಿಃ ಸಿಡಬ್ಲ್ಯೂಃ 11, ಪಿ.ಡಬ್ಲ್ಯೂಃ 3**

ಸಾಕ್ಷಿದಾರರ ಹೆಸರು : ಈರಣ್ಣ

ತಂದೆಯ ಹೆಸರು : ಶಿವಲಿಂಗಯ್ಯ ಪೂಜಾರಿ

ವಯಸ್ಸು : 33 ವರ್ಷ

ಉದ್ಯೋಗ : ಪೊಲೀಸ್ ಆರಕ್ಷಕ, ಭಟ್ಕಳ ಗ್ರಾಮೀಣ ಪೊಲೀಸ ಠಾಣೆ

ವಾಸ್ತವ್ಯ : ಪೊಲೀಸ್ ವಸತಿಗೃಹ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ22/07/2025**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ 2016 ರಿಂದ 2023 ರ ಜೂನ್ ತಿಂಗಳವರೆಗೆ ಪೊಲೀಸ್ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 12.10.2022 ರಂದು ಪುರುಷೋತ್ತಮ ಮೊಗೇರ ಇವರು ನಿಶಾಂತ ಆಸ್ಪತ್ರೆಯ ಹತ್ತಿರ ದಿಃ 28.09.2022 ರಂದು ರಾತ್ರಿ 11.00 ಗಂಟೆಗೆ ತಮ್ಮ ಸಂಬಂಧಿಕರನ್ನು ನೋಡಲು ಹೋಗಿದ್ದು ಅಲ್ಲಿ ಕೆಎ 47 ಜೆ 4616 ಮೋಟಾರು ಸೈಕಲ್ಲು ಇಟ್ಟಿದ್ದು ಪುನಃ ಮರಳಿ ಬೆಳಿಗ್ಗೆ 3.00 ಗಂಟೆಗೆ ಬಂದು ನೋಡಿದಾಗ ಅದು ಕಳ್ಳತನವಾದದ್ದು ಗೊತ್ತಾಗಿ ತಡವಾಗಿ ಬಂದು ದೂರು ನೀಡಿದ್ದು ಇರುತ್ತದೆ. ಸಿ ಆರ್ ನಂಬರ್ 132 /2022 ನೇದರಲ್ಲಿ ಆರೋಪಿ ಪತ್ತೆಗಾಗಿ ನಾನು ಹಾಗೂ ಚಾಸಾ 19 ಮತ್ತು 10 ಇವರೆಲ್ಲಾ ಸೇರಿ ಆರೋಪಿ ಪತ್ತೆಗಾಗಿ ಹುಡುಕುವಾಗಿ ಆರೋಪಿ ಮಂಜುನಾಥ ಈತನ್ನು ಮನೆಯಲ್ಲಿದ್ದ ಬಗ್ಗೆ ಗೊತ್ತಾಗಿದ್ದು ಅವನನ್ನು ಹಿಡಿದು ಚಾಸಾ 12 ರವರ ಮುಂದೆ ಹಾಜರುಪಡಿಸಿದ್ದು ಆರೋಪಿಗೆ ನೊಟೀಸು ನೀಡಿ ವಿಚಾರಣೆ ಮಾಡಿದಾಗ ಸದರಿಯವನು ದಿಃ 29.09.2022 ರಂದು ಬೆಳಿಗ್ಗೆ 2.00 ಗಂಟೆಗೆ ನಿಶಾಂತ್ ಆಸ್ಪತ್ರೆಯಲ್ಲಿಟ್ಟ ವಾಹನವನ್ನು ಕಳ್ಳತನ ಮಾಡಿಕೊಂಡು ಹೋಗಿ ಸದರಿ ಬೈಕಿನ ನಂಬರ್ ಪ್ಲೇಟನ್ನು ಬಿಸಾಡಿ ಕಳ್ಳತನ ಮಾಡಿ ದಿಃ 02.09.2022 ರಂದು ದಂಡಿನ ದುರ್ಗಾ ದೇವಾಲಯದ ಹತ್ತಿರ ನಿಲ್ಲಿಸಿದ್ದ ಕೆಎ 47 ಆರ್ 9027 ನೇದನ್ನು ಕಳ್ಳತನ ಮಾಡಿಕೊಂಡಿರುವುದಾಗಿ ಒಪ್ಪಿಕೊಂಡಿರುತ್ತಾನೆ ಹಾಗೆ ಒಟ್ಟು 8 ಸೈಕಲ್ಲುಗಳನ್ನು ಕಿದ್ವಾಯಿ ರಸ್ತೆಯ ಮಸೀದಿ ಹತ್ತಿರ ಹಾಗೂ

ಅಮೀನಾ ಅಪಾರ್ಟ ಮೆಂಟ ಹತ್ತಿರ, ರಘುನಾಥ ರಸ್ತೆಯ 3 ನೆ ೀ ಕ್ರಾಸ್ , ಉಸ್ಮಾನ್ ನಗರದ 3 ನೇ ಕ್ರಾಸ ಹತ್ರಿರ, ಸಿದ್ದೀಕ್ ಬಿಲ್ಡಿಂಗ್ ದಂಡಿನದುರ್ಗಾ ದೇವಾಲಯದ ಹತ್ತಿರ ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾನೆ. ಆರೋಪಿಯನ್ನು ನೋಡಿದರೆ ಸಾಕ್ಷಿ ಗುರುತಿಸುತ್ತೇನೆಂದು ನುಡಿದಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಜೆ ಎನ್ ವಕೀಲರಿಂದ,**

ಕ್ರೈಂ ನಂಬರ್ 132/2022 ಅನ್ನು ದಾಖಲಿಸುವ ಕಾಲಕ್ಕೆ ಆರೋಪಿಯ ಹೆಸರು ನಮಗೆ ಗೊತ್ತಿರಲಿಲ್ಲ. ದಾಳಿಗೆ ಹೋಗುವ ಕಾಲಕ್ಕೆ ಆರೋಪಿಯ ಹೆಸರು ನಮಗೆ ಗೊತ್ತಿತ್ತು. ದಾಳಿಗೆ ನಾನು , ಚಾಸಾ 9 ಮತ್ತು 10 ರವರು ಹೋಗಿದ್ದು ಇರುತ್ತದೆ. ಆರೋಪಿಯನ್ನು ಅವನ ಮನೆಯ ಹತ್ತಿರ ಬಂಧಿಸಿರುತ್ತೇವೆ. ಆರೋಪಿಯ ಮನೆ ಹತ್ತಿರ ಅಕ್ಕಪಕ್ಕದಲ್ಲಿ ರಾಷ್ಟ್ರೀಯ ಹೆದ್ದಾರಿ ಹಾಗೂ ಮನೆಗಳು ಇವೆ. ಬಂಧಿಸುವ ಕಾಲಕ್ಕೆ ಅಕ್ಕಪಕ್ಕದವರು ನೋಡಿರುತ್ತಾರೆ. ಅರೋಪಿಯನ್ನು ಬಂಧಿಸುವ ಕಾಲಕ್ಕೆ ಗುನ್ಹಾ ಸ್ಥಳದಲ್ಲಿ 2 ವಾಹನಗಳು ಇದ್ದವು. ಆರೋಪಿಯು ತನಿಖಾಧಿಕಾರಿಗಳ ಸಮಕ್ಷಮ ಹೇಳಿಕೆ ನೀಡಿರುತ್ತಾರೆ. ನಾನು ಪಿ ಎಸ್ ಐ ರವರ ಸಮಕ್ಷಮ ಹೇಳಿಕೆಯನ್ನು ನೀಡಿದ್ದು ಇರುತ್ತದೆ. ನಾವು ಯಾವುದೇ ದಾಳಿ ಮಾಡಿದ್ದೇ ಇಲ್ಲಾ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳಿಗ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ. ಸದರಿ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಾ .**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**